**ದಿನಾಂಕ:22-08-2023 ರಂದು ಶ್ರೀ ಕೆ.ಪಿ. ಮೋಹನ್ ರಾಜ್ ಭಾ.ಆ.ಸೇ., ಸನ್ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿಗಳು, ಜಿ.ಪಂ., ವಿಜಯನಗರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಗತಿ ಪರಿಶೀಲನಾ ಸಭಾ ನಡವಳಿಗಳು :**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ವಿಜಯನಗರ ಇವರು ಹಾಜರಾದ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿಗಳು, ಜಿ.ಪಂ.ವಿಜಯನಗರ ಮತ್ತು ಜಿಲ್ಲಾ ಪಂಚಾಯತ್ ನ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು. ನಂತರ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಪ್ರಗತಿ ಪರಿಶೀಲನಾ ಸಭೆ ನಡೆಸಿಕೊಡುವಂತೆ ಕೋರಿದರು.

- ಮಾನ್ಯ ಅಧ್ಯಕ್ಷರು ಮಾತನಾಡಿ ವಿಜಯನಗರ ಜಿಲ್ಲೆಯು ನೂತನವಾಗಿ ಸೃಜನೆಯಾಗಿದ್ದು, ಜಿಲ್ಲೆಯನ್ನು ಉತ್ತಮ ಶ್ರೇಣಿಗೆ ತೆಗೆದುಕೊಂಡು ಬರಲು ಜಿಲ್ಲೆಯ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸೂಚಿಸಿದರು.
- ಜಿಲ್ಲಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ಅಧಿಕಾರಿಗಳು ಮಾತನಾಡಲು ಟೇಬಲ್ ಗಳಿಗೆ ಮೈಕ್ ವ್ಯವಸ್ಥೆಯನ್ನು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ಮೈಕ್ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಸೂಚಿಸಿದರು.
- ಬಳ್ಳಾರಿ ಜಿಲ್ಲೆಯಿಂದ ವಿಂಗಡನೆಯಾಗಿ ವಿಜಯನಗರ ಜಿಲ್ಲೆಯು ಸೃಜನೆಯಾಗಿದ್ದು, ನೂತನ ಜಿಲ್ಲೆಯಲ್ಲಿ ಇನ್ನೂ ಪೂರ್ಣವಾಗದ ಕೆಲಸಗಳನ್ನು ಪೂರ್ಣಗೊಳಿಸಲು ಸೂಚಿಸಿದರು.
- ಜಿಲ್ಲಾ ಮಟ್ಟದ ಅಧಿಕಾರಿಗಳ ಕಛೇರಿಗಳ ಬಗ್ಗೆ ವಿಚಾರಿಸಲಾಗಿ ರೇಷ್ಮೆ ಇಲಾಖಾಧಿಕಾರಿಗಳು ಮಾತನಾಡಿ ತಮ್ಮ ಇಲಾಖೆಗೆ ತಾಲ್ಲೂಕು ಕಛೇರಿ ಮೇಲ್ಗಡೆ ಸ್ಥಳಾವಕಾಶ ಕಲ್ಪಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು. ಆಯುಷ್ ಇಲಾಖಾಧಿಕಾರಿಗಳು ಮಾತನಾಡಿ ಪ್ರವಾಸಿ ಮಂದಿರದಲ್ಲಿ ತಾತ್ಕಾಲಿಕವಾಗಿ ಕಛೇರಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಎಂದು ಸಭೆಗೆ ಮಾಹಿತಿ ನೀಡಿದರು.
- ಮಾನ್ಯ ಅಧ್ಯಕ್ಷರು ಮಾತನಾಡಿ ಸನ್ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ದಿನಾಂಕ:01-07-2023 ರಂದು ನಡೆದ ಸಭೆಯಲ್ಲಿ ನೀಡಿದ ಸೂಚನೆಗಳಂತೆ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಕೆಲಸ ನಿರ್ವಹಿಸಲು ಸೂಕ್ತ ವ್ಯವಸ್ಥೆಯನ್ನು ಮಾಡಲಾಗಿದೆ. ಅಧಿಕಾರಿಗಳು ಉತ್ತಮವಾಗಿ ಕಾರ್ಯನಿರ್ವಹಿಸಲು ಸೂಚಿಸಿದರು.
- ಅಧ್ಯಕ್ಷರು ಮೀನುಗಾರಿಕೆ ಇಲಾಖೆ ಮಾಹಿತಿ ನೀಡಲು ಸೂಚಿಸಿದಾಗ, ಮೀನುಗಾರಿಕೆ ಇಲಾಖೆಯ ಅಧಿಕಾರಿಗಳು ಮಾತನಾಡಿ ವಿಜಯನಗರ ಜಿಲ್ಲೆಯಲ್ಲಿ 11000 ಟನ್ಸ್ ಮೀನುಗಾರಿಕೆ ಉತ್ಪಾದನೆಯಾಗುತ್ತಿದ್ದು, ಮುಖ್ಯವಾಗಿ ಟಿ.ಬಿ.ಡ್ಯಾಂ ಪ್ರದೇಶದಲ್ಲಿ ಉತ್ಪಾದನೆಯಾಗುತ್ತಿದೆ. ರಾಜ್ಯದಲ್ಲಿ ಮೀನು ಉತ್ಪಾದನೆಯಲ್ಲಿ ಜಿಲ್ಲೆಯು 22ನೇ ಸ್ಥಾನದಲ್ಲಿದೆ ಎಂದು ಸಭೆಗೆ ಮಾಹಿತಿ ನೀಡಿದರು.
- ಮಾನ್ಯ ಅಧ್ಯಕ್ಷರು ಮಾತನಾಡಿ ಡಿ.ಎಚ್.ಓ ವಿಜಯನಗರ ಇವರಿಂದ ಜಿಲ್ಲೆಯ ಸಾರ್ವಜನಿಕರ ಆರೋಗ್ಯದ ಕುರಿತಾಗಿ ಈ ಜಿಲ್ಲೆಯ ಸರ್ವಾಜನಿಕರು ಯಾವ ಯಾವ ರೋಗದಿಂದ ಬಳಲುತ್ತಿದ್ದರೆ ಎಂಬುದರ ಬಗ್ಗೆ ವಿವರವಾದ ಮಾಹಿತಿಯನ್ನು ನೀಡಲು ಹಾಗೂ ಜಿಲ್ಲಾ ಆಯುಷಾ ಅಧಿಕಾರಿಗಳು, ವಿಜಯನಗರ ಡಿ.ಎಚ್.ಓ.ವಿಜಯನಗರ ಆರ್.ಸಿ.ಎಚ್. ಓ ವಿಜಯನಗರ ಡಿ.ಎಸ್. ಓ. ವಿಜಯನಗರ ನೀವುಗಳು ಜಿಲ್ಲೆಯ ಆರೋಗ್ಯದ ಬಗ್ಗೆ ಒಂದು ತಂಡ ರಚನ ಮಾಡಿಕೊಂಡು ಸಂಪೂರ್ಣ ವರದಿಯನ್ನು ನೀಡಲು ಸೂಚಿಸಿದರು.
- ಮಾನ್ಯ ಅಧ್ಯಕ್ಷರು ಮಾತನಾಡಿ ಹೊಸದಾಗಿ ಸೃಜನೆಯಾದ ಜಿಲ್ಲೆಗಳಲ್ಲಿ ಮೆಡಿಕಲ್ ಕಾಲೇಜ್ ಗಳು ಪ್ರಾರಂಭವಾಗಿರುತ್ತವೆ. ವಿಜಯನಗರ ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ಸೃಜನೆ ಬಗ್ಗೆ ಜಿಲ್ಲಾ ಆರೋಗ್ಯಾಧಿಕಾರಿಗಳನ್ನು ವಿಚಾರಿಸಲಾಗಿ, ಇಲಾಖಾಧಿಕಾರಿಗಳು ಜಿಲ್ಲೆಯಲ್ಲಿ ಮೆಡಿಕಲ್ ಕಾಲೇಜ್ ಸೃಜನೆಯಾಗಿರುವುದಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು. ನಂತರ ಮಾನ್ಯ ಅಧ್ಯಕ್ಷರು ವಿಜಯನಗರ ಜಿಲ್ಲೆಯು ಅತಿ ಹಿಂದುಳಿದ ಜಿಲ್ಲೆಯಾಗಿರುವುದರಿಂದ ಒಂದು ಮೇಡಿಕಲ್ ಕಾಲೇಜ್ ಪ್ರಾರಂಭಿಸಲು ಅತಿ ತುರ್ತಾಗಿ ವರದಿಯನ್ನು ತಯಾರಿಸಿ ನಿಯಮಾನುಸಾರ ಸೂಕ್ತ ಕ್ರಮವಹಿಸಲು ಹಾಗೂ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿದರು. ಅವಶ್ಯವಿದ್ದಲ್ಲಿ ಕೆ.ಎಂ.ಇ.ಆರ್.ಸಿ ಅಥವಾ ಡಿ.ಎಂ.ಎಫ್ ಅನುದಾನದಲ್ಲಿನ ಒಂದು ಭಾಗವನ್ನು ನೀಡಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾಧಿಕಾರಿಗಳು ಮಾತನಾಡಿ ಇಲಾಖೆಗೆ ಜಿಲ್ಲಾ ಮಟ್ಟದ ಕಛೇರಿ ಇರುವುದಿಲ್ಲ ಬಾಡಿಗೆ ಕಟ್ಟಡ ಕಛೇರಿ ಚಿಕ್ಕದಾಗಿದ್ದು ಇನ್ನೂ ಉತ್ತಮವಾದ ಕಟ್ಟಡದ ಅವಶ್ಯಕತೆ ಇರುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ಅವಕಾಶವಿದ್ದಲ್ಲಿ ತಮ್ಮ ಇಲಾಖೆಯಿಂದ ಬೇರೊಂದು ಬಾಡಿಗೆ ಕಟ್ಟಡ ಪಡೆಯಲು ಕಾರ್ಯನಿರ್ವಹಿಸಲು ಸೂಚಿಸಿದರು. ನಂತರ ಅಪೌಷ್ಟಿಕತೆಯ ಮಕ್ಕಳ ಬಗ್ಗೆ ಜಿಲ್ಲೆಯ ಸ್ಥಾನದ ಬಗ್ಗೆ ವಿಚಾರಿಸಲಾಗಿ ಇಲಾಖಾಧಿಕಾರಿಗಳು ಅಪೌಷ್ಟಿಕತೆ ಮಕ್ಕಳ ಕುರಿತಂತೆ ಜಿಲ್ಲೆಯು 7ನೇ ಸ್ಥಾನದಲ್ಲಿರುವುದೆಂದು ಸಭೆಗೆ ಮಾಹಿತಿ ನೀಡಿದರು.
- ಸಾಮಾಜಿಕ ಅರಣ್ಯ ಇಲಾಖಾಧಿಕಾರಿಗಳು ಮಾತನಾಡಿ ಸಾಮಾಜಿಕ ಅರಣ್ಯ ವಿಸ್ತೀರ್ಣ ಪ್ರದೇಶದಲ್ಲಿ ಜಿಲ್ಲೆಯು 5ನೇ ಸ್ಥಾನದಲ್ಲಿರುತ್ತೆಂದು ಸಭೆಗೆ ಮಾಹಿತಿ ನೀಡಿದರು.
- ವಯಸ್ಕರ ಶಿಕ್ಷಣಾಧಿಕಾರಿಗಳು ಮಾತನಾಡಿ ಇಲಾಖೆಯಲ್ಲಿ ರಾಜ್ಯ ಮಟ್ಟದ ಕಛೇರಿಯಿಂದ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ಕಛೇರಿಯ ಶಿಕ್ಷಣಾಧಿಕಾರಿಯವರನ್ನು ವಿಜಯನಗರ ಜಿಲ್ಲೆಗೆ ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.
- 2023-24ನೇ ಸಾಲಿನ ಲಿಂಕ್ ಡಾಕ್ಯೂಮೆಂಟ್ ಕ್ರಿಯಾ ಯೋಜನೆಗೆ ಶಿಕ್ಷಣ ಇಲಾಖೆಯ ಒಂದು ಲೆ.ಶೀ. ಸಾಮಾಜಿಕ ಅರಣ್ಯ ಇಲಾಖೆಯ ಒಂದು ಲೆ.ಶೀ. ಹಾಗೂ ಪಂ.ರಾ.ಇಂಜಿನಿಯರಿಂಗ್ ಇಲಾಖೆಯ 5 ಲೆಕ್ಕ ಶೀರ್ಷಿಕೆಗಳನ್ನು ಒಟ್ಟಾರೆಯಾಗಿ 7 ಲೆ.ಶೀ.ಗಳನ್ನು ಹೊರತುಪಡಿಸಿ ಕ್ರಿಯಾ ಯೋಜನೆಗೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಆಡಳಿತಾಧಿಕಾರಿಗಳು, ಜಿ.ಪಂ. ವಿಜಯನಗರ ಇವರ ಅಧ್ಯಕ್ಷತೆಯಲ್ಲಿ ನಡೆದ ವಿಡಿಯೋ ಸಂವಾದದ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಕಾರ್ಯಕ್ರಮವಾರು ಇಲಾಖೆಗೆ ನಿಗದಿಪಡಿಸಿದ ಅನುದಾನಕ್ಕನುಗುಣವಾಗಿ ವೆಚ್ಚ ಭರಿಸಲು ಇಲಾಖಾದಿಕಾರಿಗಳು ಕ್ರಮವಹಿಸಲು ಸೂಚಿಸಿದರು.
- ಶಾಲಾ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಮಾನ್ಯ ಅಧ್ಯಕ್ಷರು ಪ್ರಗತಿ ವರದಿಯನ್ನು ಕೇಳಲಾಗಿ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಇವರು ಮಾತನಾಡಿ ಕಿಚನ್ ಗಾರ್ಡನ್ ಗಳನ್ನು ನರೇಗಾ convergence ನಲ್ಲಿ ತೆಗೆದುಕೊಳ್ಳಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು. ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ಇತ್ತೀಚೆಗೆ ಮಳೆಯಿಂದ ಶಾಲೆಗಳ ಕೊಠಡಿಗಳು ಸೋರುತ್ತಿದ್ದರೆ ಆರ್. ಸಿ.ಸಿ. ಮೇಲುಗಡೆ ರೂಫ್ ಶೀಟ್ ಹಾಕಿ ಕ್ರಮವಹಿಸಲು ಹಾಗೂ ಈ ಕುರಿತು ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಿ ನಿಯಮಾನುಸಾರ ಕ್ರಮವಹಿಸಲು ಸೂಚಿಸಿದರು.

**1) ಶಾಲಾ ಶಿಕ್ಷಣ :**

ಶಾಲಾ ಶಿಕ್ಷಣ ಇಲಾಖೆಯ ಪ್ರಗತಿ ವರದಿಯಂತೆ 40 ಶಾಲೆಗಳಲ್ಲಿ ಶೌಚಾಲಯ ಹಾಗೂ ಕುಡಿಯುವ ನೀರಿನ ಸೌಲಭ್ಯ ಎನ್ಆರ್.ಇ.ಜಿ.ಎ. Convergence ನಲ್ಲಿ ಕ್ರಮವಹಿಸಲು ಉಪ ಕಾರ್ಯದರ್ಶಿಗಳಿಗೆ ಸೂಚಿಸಿದರು.

ಉಪನಿರ್ದೇಶಕರು ಪ್ರಗತಿ ವರದಿಯನ್ನು ಸಭೆಗೆ ಸರಿಯಾದ ರೀತಿಯಲ್ಲಿ ಮಂಡಿಸದೇ ಇದುದರಿಂದ ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಬೆಂಗಳೂರು ಕಛೇರಿಯಲ್ಲಿ ಮುಂದಿನ ವಾರದಲ್ಲಿ ಇಲಾಖೆಯ ಪ್ರಗತಿ ವರದಿಯೊಂದಿಗೆ ಪರಿಶೀಲನೆಗೆ ಹಾಜರಾಗಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ , ವಿಜಯನಗರ)**

**2) ಮಧ್ಯಾಹ್ನ ಬಿಸಿಯೂಟ ಯೋಜನೆ :**

ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ ವಿಜಯನಗರ ಇವರು ಮಾತನಾಡಿ ಜಿಲ್ಲೆಯ ಎಲ್ಲಾ ಶಾಲೆಗಳಿಗೆ ಮೊದಲನೇ ತ್ರೈ ಮಾಸಿಕ ಆಹಾರ ಸರಬರಾಜು ಆಗಿರುತ್ತದೆ. 2ನೇ ತ್ರೈಮಾಸಿಕ ಟೆಂಡರ್ ಆಗಿದೆ. 2ನೇ ತ್ರೈಮಾಸಿಕ ಆಹಾರ ಸರಬರಾಜು ಬರುವವರೆಗೂ ಶಾಲೆಗಳಲ್ಲಿ ಆಹಾರದ ಲಭ್ಯತೆ ಇದ್ದು, ಸದ್ಯಕ್ಕೆ ತೊಂದರೆಯಿರುವುದಿಲ್ಲ. ಜಿಲ್ಲೆಯಲ್ಲಿ ಇಸ್ಕಾನ್ ನಿಂದ 160 ಶಾಲೆಗಳಿಗೆ ಬಿಸಿಯೂಟ ಆಹಾರ ಪೂರೈಕೆಯಾಗುತ್ತಿದ್ದು, 1236 ಶಾಲೆಗಳಿಗೆ ಇಲಾಖೆಯಿಂದ ಆಹಾರ ಪೂರೈಕೆಯಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

**(ಕ್ರಮ: ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ , ವಿಜಯನಗರ)**

3) **ವಯಸ್ಕರ ಶಿಕ್ಷಣ :**

ಇಲಾಖಾಧಿಕಾರಿಗಳು ಮಾತನಾಡಿ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಆಲೂರು ಮತ್ತು ಜುಮ್ಮೋಬನಹಳ್ಳಿ ಹಾಗೂ ಕೊಟ್ಟೂರು ತಾಲ್ಲೂಕಿನ ಅಲಬೂರು ಮತ್ತು ಕೋಗಳಿ ಗ್ರಾ.ಪಂ.ಗಳ 2200 ಜನ ಅನಕ್ಷರಸ್ಥರಿಗೆ ಭೌತಿಕ ಗುರಿಗೆ ರೂ.7.70 ಲಕ್ಷ ನಿಗದಿಯಾಗಿರುತ್ತದೆ. ಅನುದಾನ ಮರುಹೊಂದಾಣಿಕೆಯಾದ ನಂತರ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು ಇವರ ಮಾರ್ಗಸೂಚಿಗಳಂತೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು. ಮಾನ್ಯ ಅಧ್ಯಕ್ಷರು ಮಾತನಾಡಿ ನಿಯಮಾನುಸಾರ ವೆಚ್ಚ ಭರಿಸಲು ಸೂಚಿಸಿದರು.

**(ಕ್ರಮ: ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ವಯಸ್ಕರ ಶಿಕ್ಷಣ ಇಲಾಖೆ , ವಿಜಯನಗರ)**

4) **ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ :**

ಮಾನ್ಯ ಅಧ್ಯಕ್ಷರು ಇಲಾಖೆಯ ಮಾಹಿತಿಯನ್ನು ಪರಿಶೀಲಿಸಿ ಪ್ರಗತಿ ವರದಿಯಲ್ಲಿ ಆರ್ಥಿಕ ಗುರಿ ಮಾಹಿತಿಯನ್ನು ಅಳವಡಿಸಿ ಸಲ್ಲಿಸಲು ಸೂಚಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ , ವಿಜಯನಗರ)**

5) **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ ಬಿ.ಸಿ.ಜಿ. ಕಾರ್ಯಕ್ರಮದಡಿ ಪ್ರಗತಿಯು ಶೇ.63.3 ಕಡಿಮೆ ಸಾಧನೆಯಾಗಿದ್ದು ಪ್ರಗತಿಯನ್ನು ಸಾಧಿಸಲು ಕ್ರಮವಹಿಸಲು ಸೂಚಿಸಿದರು. ಹಾಗೂ ಜಿಲ್ಲೆಯಲ್ಲಿ ಟಿ.ಬಿ. ಕಾರ್ಯಕ್ರಮ ಕುರಿತಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ಸಲ್ಲಿಸಲು ಸೂಚಿಸಿದರು. ಹಾಗೂ ರಾಜ್ಯದಿಂದ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳಲ್ಲಿ ವಿಜಯನಗರ ಜಿಲ್ಲೆಯು ಯಾವ ಸ್ಥಾನದಲ್ಲಿದೆ ಎಂಬ ಮಾಹಿತಿಯನ್ನು ಒಂದು ವಾರದೊಳಗೆ ಸಲ್ಲಿಸಲು ಸೂಚಿಸಿದರು. ನಂತರ ಇಲಾಖಾಧಿಕಾರಿಗಳು ಮಾತನಾಡಿ 2 ಮಕ್ಕಳ ಗುರಿ ಶಸ್ತ್ರ ಚಿಕಿತ್ಸೆ ಪುರುಷರ ಸಂತಾನ ಹರಣ ಕಾರ್ಯಕ್ರಮದಲ್ಲಿ ಜಿಲ್ಲೆಯು ರಾಜ್ಯದಲ್ಲಿ 3ನೇ ಸ್ಥಾನದಲ್ಲಿದೆ ಎಂದು ಸಭೆಗೆ ಮಾಹತಿ ನೀಡಿದರು.

ಆರೋಗ್ಯ ಇಲಾಖೆಗೆ ಡ್ರಗ್ ವೇರ್ ಹೌಸ್ ಅವಶ್ಯಕತೆ ಇರುವ ಬಗ್ಗೆ ಸಭೆಗೆ ಮಾಹಿತಿ ನೀಡಿದಾಗ ಮಾನ್ಯ ಅಧ್ಯಕ್ಷರು ಮಾತನಾಡಿ ಡ್ರಗ್ ವೇರ್ ಹೌಸ್ ಗೆ ಸಂಬಂಧಿಸಿದಂತೆ ದೀರ್ಘಾವಧಿ ಕ್ರಿಯಾ ಯೋಜನೆಯನ್ನು ತಯಾರಿಸುವುದು ಹಾಗೂ ಇಲಾಖೆ ಕಛೇರಿ ಕಟ್ಟಡ ಇದ್ದರೆ ಕಟ್ಟಡದಲ್ಲಿ ಸ್ಥಳಾವಕಾಶವನ್ನು ಕಲ್ಪಿಸಿಕೊಂಡು ನಿಯಮಾನುಸಾರ ಕ್ರಮವಹಿಸಲು ಇಲಾಖಾಧಿಕಾರಿಗಳಿಗೆ ಸೂಚಿಸಿದರು.

ಮುಂದುವರೆದು ಆರೋಗ್ಯ ಇಲಾಖೆಯಲ್ಲಿ 168 ವೈದ್ಯರ ಪೈಕಿ 100 ವೈದ್ಯರು ಕಾರ್ಯನಿರ್ವಹಿಸುತ್ತಿರುವ ಮಾಹಿತಿಯನ್ನು ಪಡೆದ ನಂತರ ಆರೋಗ್ಯ ಅಧಿಕಾರಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸುವಾಗ Deployment Plan ತಯಾರಿಸಿಕೊಂಡು ಎಂ.ಎಂ.ಆರ್. , ಐ.ಎಂ.ಆರ್. ಕೇಸಸ್ ಜಾಸ್ತಿ ಇರುವ ಕಡೆ ಲೆಕ್ಕಾಚಾರ ಮಾಡಿ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ , ವಿಜಯನಗರ)**

6) **ಆಯುಷ್ ಇಲಾಖೆ :**

ಇಲಾಖಾಧಿಕಾರಿಗಳು ಮಾತನಾಡಿ ವಿಜಯನಗರ ಜಿಲ್ಲೆಯಲ್ಲಿ ಆಯುಷ್ ಇಲಾಖೆಯಿಂದ ಮುಖ್ಯವಾಗಿ Arthrities & Paralasis ಖಾಯಿಲೆಗಳಿಗೆ ಪಂಚಕರ್ಮ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ರಾಜ್ಯದಲ್ಲಿ ವಿಜಯನಗರ ಜಿಲ್ಲೆಯು Arthrities & Paralasisನಲ್ಲಿ ನಾಲ್ಕನೇ ಸ್ಥಾನದಲ್ಲಿರುತ್ತದೆ. ಆಯುಷ್ ಆರೋಗ್ಯ ಮತ್ತು ಕ್ಷೇಮ ಕೇಂದ್ರ 41 ಇದ್ದು ಸದರಿ ಕೇಂದ್ರಗಳಿಂದ ಯೋಗ ತರಬೇತಿಯಿಂದ Arthrities &

Paralasis ತಿಳುವಳಿಕೆ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಹಗರಿಬೊಮ್ಮನಹಳ್ಳಿ ಹಾಗೂ ಹಡಗಲಿ ತಾಲ್ಲೂಕಿನಲ್ಲಿ Arthrities ನಿಂದ ಜನ ಸಾಮಾನ್ಯರಲ್ಲಿ ಹೆಚ್ಚು ಇರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು

ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲಾ ಆರೋಗ್ಯಾಧಿಕಾರಿಗಳು ಇವರ ಸಹಯೋಗದೊಂದಿಗೆ ಜಂಟಿಯಾಗಿ ಚರ್ಚಿಸಿ ಆರೋಗ್ಯ ಅಧಿಕಾರಿಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ನಿಯೋಜಿಸುವಾಗ Deployment Plan ತಯಾರಿಸಿಕೊಂಡು ಸೂಕ್ತ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ , ವಿಜಯನಗರ)**

**7) ಸಮಾಜ ಕಲ್ಯಾಣ ಇಲಾಖೆ :**

ಮಾನ್ಯ ಅಧ್ಯಕ್ಷರು ಮಾತನಾಡಿ ಜಿಲ್ಲೆಯಲ್ಲಿ ಮ್ಯಾನುವೆಲ್ ಸ್ಕ್ಯಾವೆಂಜರ್ ಮಾಹಿತಿಯನ್ನು ಕೇಳಲಾಗಿ ಇಲಾಖಾಧಿಕಾರಿಗಳು ಮಾತನಾಡಿ ಮ್ಯಾನುವೆಲ್ ಸ್ಕ್ಯಾವೆಂಜರ್ ಜಿಲ್ಲೆಯಲ್ಲಿ ಇರುವುದಿಲ್ಲ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಜಟ್ಟಿಂಗ್/ಸಕ್ಕಿಂಗ್ ಮಿಷನ್ಸ್ ತಾಲ್ಲೂಕಿಗೆ ಒಂದು ಇರುವುದಾಗಿ ಸಭೆಗೆ ಮಾಹಿತಿ ನೀಡಿದರು. ಮಾನ್ಯ ಅಧ್ಯಕ್ಷರು ಮಾತನಾಡಿ ಪಕ್ಕದ ಮೂರು ಜಿಲ್ಲೆಯಲ್ಲಿನ ಹಾಸ್ಟೆಲ್ ಗಳ ಸ್ಥಿತಿ ಹೇಗಿದೆ ಹಾಗೂ ಹೆಚ್ಚುವರಿಯಾಗಿ ಹಾಸ್ಟೆಲ್ ಅಡ್ಮಿಷನ್ ಆದ ವಿದ್ಯಾರ್ಥಿಗಳ ಬಗ್ಗೆ ಕೇಳಲಾಗಿ ಇಲಾಖಾಧಿಕಾರಿಗಳು ಮಾತನಾಡಿ ಹೆಚ್ಚುವರಿಯಾಗಿ ಹಾಸ್ಟೆಲ್ ಗಳಲ್ಲಿ ಡಾರ್ಮೆಟ್ರಿ , ಶೌಚಾಲಯಗಳನ್ನು ಮಾಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

**ಮಾನ್ಯ ಅಧ್ಯಕ್ಷರು ಮಾತನಾಡಿ ಹಾಸ್ಟೆಲ್ ಗಳಲ್ಲಿ ವಿದ್ಯಾರ್ಥಿಗಳ ಓವರ್ ಲೋಡಿಂಗ್ ಕುರಿತಂತೆ ಚರ್ಚಿಸಲಾಗಿ 3 ವರ್ಷಗಳಲ್ಲಿ ದಾಖಲಾದ ವಿದ್ಯಾರ್ಥಿಗಳಿಗೆ ಹೇಗೆ ಹಾಸ್ಟೆಲ್ ಸೌಲಭ್ಯ ಕೊಡುವುದು (ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ) ಎಂಬ ಬಗ್ಗೆ ವಿಸ್ತೃತವಾದ ಕ್ರಿಯಾ ಯೋಜನೆಯನ್ನು 4 ಇಲಾಖಾ ಅಧಿಕಾರಿಗಳು (ಪ.ಜಾ/ಪ.ಪಂ./ ಹಿಂವ/ಅಸಂ) ಹಾಗೂ ಹಾಸ್ಟೆಲ್ ದುರಸ್ತಿಗೆ ಹಾಗೂ ವಿದ್ಯಾರ್ಥಿಗಳ ವಸತಿ ನಿಲಯಗಳಲ್ಲಿ ನಿಗದಿಪಡಿಸಿದ ಗುರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ದಾಖಲಾತಿಯಾದಗ ಸದರಿ ವಿದ್ಯಾರ್ಥಿಗಳಿಗೆ ಎಷ್ಟು ಖರ್ಚು ಆಗುವುದು ಎಂಬ ಮಾಹಿತಿಯ ವರದಿಯನ್ನು ತಯಾರಿಸಿ ಮುಂದಿನ ಸಭೆಯಲ್ಲಿ ನೀಡಲು ಸೂಚಿಸಿದರು.**

**(ಕ್ರಮ: ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ /ಜಿಲ್ಲಾ ಅಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ/ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಜಿಲ್ಲಾ ಅಧಿಕಾರಿಗಳು , ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ , ವಿಜಯನಗರ)**

**8) ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಗಿ, ಒಟ್ಟಾರೆಯಾಗಿ **ರೂ.291.56 ಲಕ್ಷಗಳಿಗೆ ರೂ.66.17 ಲಕ್ಷ, ಶೇ. 22.70 ವೆಚ್ಚವಾಗಿರುತ್ತದೆ.** ಈ ಬಗ್ಗೆ ಇಲಾಖಾಧಿಕಾರಿಗಳನ್ನು ಕೇಳಲಾಗಿ ಖಾಲಿ ಹುದ್ದೆಗಳ ಅನುದಾನ ಇರುವುದರಿಂದ ಅನುದಾನ ವೆಚ್ಚವಾಗಿರುವುದಿಲ್ಲವೆಂದು ಸಭೆಗೆ ಮಾಹಿತಿ ನೀಡಿದರು.

**(ಕ್ರಮ: ಜಿಲ್ಲಾ ಅಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ವಿಜಯನಗರ)**

**9) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:**

ಇಲಾಖಾಧಿಕಾರಿಗಳು ಮಾತನಾಡಿ ವಿದ್ಯಾರ್ಥಿಗಳ ಸಂಖ್ಯೆ 6710 ಕ್ಕೆ 6575 ವಿದ್ಯಾರ್ಥಿಗಳು ಅಡ್ಮಿಷನ್ ಆಗಿರುತ್ತಾರೆಂದು ಸಭೆಗೆ ಮಾಹಿತಿ ನೀಡಿದರು.

- ನಂತರ ಮಾನ್ಯ ಅಧ್ಯಕ್ಷರು ವಿದ್ಯಾರ್ಥಿಗಳನ್ನು 4 ಇಲಾಖೆಗಳ ಹಾಸ್ಟೆಲ್ ಗಳ ಪೈಕಿ ಒಂದರಿಂದ ಇನ್ನೊಂದು ಹಾಸ್ಟೆಲ್ ಗೆ ವರ್ಗಾಯಿಸಬಹುದಾ ಎಂಬುದರ ಬಗ್ಗೆ
- ಹುದ್ದೆಗಳ ಸೃಷ್ಟಿಗೆ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಕುರಿತು
- ಹೊರಗುತ್ತಿಗೆ ಹುದ್ದೆಗಳನ್ನು ತೆಗೆದುಕೊಳ್ಳುವ ಕುರಿತು.
- **ಹಾಸ್ಟೆಲ್ ಗಳ ಕಟ್ಟಡಗಳು , ನಿವೇಶನ ಹಾಗೂ ಅನುದಾನದ ಮಾಹಿತಿ**

**ಚರ್ಚಿಸಲಾಯಿತು. ನಂತರ ನಾಲ್ಕು ಇಲಾಖೆಯ ಅಧಿಕಾರಿಗಳು ಈ ಬಗ್ಗೆ ಚರ್ಚಿಸಿ ಜಂಟಿಯಾಗಿ ವರದಿಯನ್ನು ನೀಡಲು ಸೂಚಿಸಿದರು.**

**(ಕ್ರಮ: ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ /ಜಿಲ್ಲಾ ಅಧಿಕಾರಿಗಳು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ/ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ/ಜಿಲ್ಲಾ ಅಧಿಕಾರಿಗಳು , ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ , ವಿಜಯನಗರ)**

**10) ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ:**

ಇಲಾಖಾಧಿಕಾರಿಗಳು ಮಾತನಾಡಿ ಒಟ್ಟು ಜಿಲ್ಲೆಯಲ್ಲಿ 9 ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಿದ್ದು ಹರಪನಹಳ್ಳಿ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. 3 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳ ಮಂಜೂರಾತಿ ಸಂಖ್ಯೆ 250 ವಿದ್ಯಾರ್ಥಿಗಳು ದಾಖಲಾಗಿರುತ್ತಾರೆಂದು ಸಭೆಗೆ ಮಾಹಿತಿ ನೀಡಿದರು.

ಮುಂದುವರೆದು ಅಲ್ಪ ಸಂಖ್ಯಾತರ ಹಾಸ್ಟೆಲ್ ಕಟ್ಟಡಗಳಿಗೆ ಬಡ್ಜೆಟ್ ನಲ್ಲಿ ನಾಲ್ಕು ಹಾಸ್ಟೆಲ್ ಪ್ರಾವಿಜನ್ ಆಗಿದೆ ಎಂದು ಹಾಗೂ ಹೊಸಪೇಟೆ ಪಟ್ಟಣದಲ್ಲಿ ನಿವೇಶನ ಇಲ್ಲದಿರುವ ಬಗ್ಗೆ ಸಭೆಗೆ ಮಾಹಿತಿ ನೀಡಲಾಗಿ ಮಾನ್ಯ ಅಧ್ಯಕ್ಷರು ಮಾತನಾಡಿ ಬುಕ್ಕಸಾಗರದಲ್ಲಿ ತೋಟಗಾರಿಕೆ ಇಲಾಖೆಯ ನಿವೇಶನ ವಿಸ್ತೀರ್ಣ ಪೈಕಿ ನಿವೇಶನ ನೀಡಲು ಕೋರಿಕೆಯನ್ನು ನೀಡಿ ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಜಿಲ್ಲಾ ಅಧಿಕಾರಿಗಳು , ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ , ವಿಜಯನಗರ/ ಉಪನಿರ್ದೇಶಕರು , ತೋಟಗಾರಿಕೆ ಇಲಾಖೆ , ವಿಜಯನಗರ)**

**11) ಕೃಷಿ ಇಲಾಖೆ:**

ಇಲಾಖಾಧಿಕಾರಿಗಳು ಮಾತನಾಡಿ ಕೃಷಿ ಇಲಾಖೆಯ ಬಿತ್ತನೆ ಬೀಜ ಕಾರ್ಯಕ್ರಮದಡಿ ಶೇ.88 ಪ್ರಗತಿ ಯಾಗಿರುತ್ತದೆ ಎಂದು ಸಭೆಗೆ ಮಾಹಿತಿ ನೀಡಿದರು. ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ಈ ಕುರಿತು ದಿನಾಂಕ: 23-08-2023 ರಂದು ಬೆಳಿಗ್ಗೆ 11.00 ಗಂಟೆಗೆ ಜರುಗುವ ಸಭೆಯಲ್ಲಿ ವಿಸ್ತೃತವಾಗಿ ಚರ್ಚಿಸಲಾಗುವುದು ಎಂದು ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಕೃಷಿ ಇಲಾಖೆ , ವಿಜಯನಗರ)**

**12) ತೋಟಗಾರಿಕೆ ಇಲಾಖೆ:**

ಇಲಾಖಾಧಿಕಾರಿಗಳು ಮಾತನಾಡಿ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು ಕ್ರಿಯಾ ಯೋಜನೆಯನ್ವಯ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ವೆಚ್ಚ ಭರಿಸಲಾಗುವುದೆಂದು ಸಭೆಗೆ ಮಾಹಿತಿ ನೀಡಿದರು.

ಇಲಾಖಾಧಿಕಾರಿಗಳು ಮಾತನಾಡಿ ರಾಜ್ಯ ವಲಯ ಕಾರ್ಯಕ್ರಮದಡಿ ಎಣ್ಣೆತಾಳೆ ಬೆಳೆ ಕಾರ್ಯಕ್ರಮದಡಿ ಕಲ್ಪವೃಕ್ಷ ಕಂಪನಿ , ಹರಿಹರದವರು ಇರುತ್ತಾರೆಂದು ಸಭೆಗೆ ಮಾಹಿತಿ ನೀಡಿದರು. ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ವಿಸ್ತೀರ್ಣ ಅಭಿವೃದ್ಧಿ ಕಾರ್ಯಕ್ರಮದಡಿ ಭತ್ತ ಬೆಳೆಯುವ ಕಡೆ ಬ್ಯಾಕ್ ವಾಟರ್ ಏರಿಯಾದಲ್ಲಿ Oil Palm ಬೆಳೆ ಬೆಳೆಯಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು , ತೋಟಗಾರಿಕೆ ಇಲಾಖೆ , ವಿಜಯನಗರ)**

**13) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ಇಲಾಖಾಧಿಕಾರಿಗಳು ಮಾತನಾಡಿ ಪೂರಕ ಪೌಷ್ಟಿಕ ಆಹಾರದಡಿ ಶೇ.86 ಸಾಧನೆಯಾಗಿರುತ್ತದೆ. ಬಾಡಿಗೆ ಕಟ್ಟಡದಲ್ಲಿ 200 ಅಂಗನವಾಡಿ ಕಟ್ಟಡಗಳು ಕಾರ್ಯನಿರ್ವಹಿಸುತ್ತಿರುವುದಾಗಿ ಸಭೆಗೆ ಮಾಹಿತಿ ನೀಡಿದರು.

ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ

- ಹಡಗಲಿ ತಾಲ್ಲೂಕಿನ **ಪೂರಕ ಪೌಷ್ಠಿಕ ಆಹಾರ ಕಾರ್ಯಕ್ರಮದಡಿ ಶೇ.86 ಕಡಿಮೆ** ಸಾಧನೆ ಬಗ್ಗೆ ಪರಿಶೀಲಿಸಿ ಪ್ರಗತಿ ಸಾಧಿಸಲು ಕ್ರಮವಹಿಸುವುದು.
- ಅಂಗನವಾಡಿ ಶಾಲೆಗಳಲ್ಲಿ ಮಕ್ಕಳು ಜಾಸ್ತಿ ಇದ್ದು ಓವರ್ ಲೋಡಿಂಗ್ ಬಗ್ಗೆ.
- ಅದೇ ಏರಿಯಾದಲ್ಲಿ ಅಂಗನವಾಡಿ ಕಟ್ಟಡಗಳಿಗೆ ಜಾಗ ಇರುವ ಬಗ್ಗೆ , ನಿವೇಶನ ಲಭ್ಯವಿಲ್ಲದಿದ್ದರೆ ಶಾಲಾ ಕಟ್ಟಡದಲ್ಲಿ ನಡೆಸುವ ಬಗ್ಗೆ
- ಅಂಗನವಾಡಿ ಕಟ್ಟಡಗಳ Shifted to School or new site plan ತಯಾರು ಮಾಡಿದ ಬಗ್ಗೆ ಮಾಹಿತಿ ನೀಡಲು ಸೂಚಿಸಿದರು.

ನಂತರ ಮಾತೃ ಪೂರ್ಣ ಯೋಜನೆಯಡಿ ಬಾಣಂತಿಯರಿಗೆ 45 ದಿನಗಳ ಆಹಾರವನ್ನು ಮನೆಗೆ ಸರಬರಾಜು ಮಾಡುವ ಆರ್ಥಿಕ ಗುರಿ 66.48 ಆಗಿದ್ದು ಈ ಬಗ್ಗೆ ಕೇಳಲಾಗಿ ಇಲಾಖಾಧಿಕಾರಿಗಳು ಮಾತನಾಡಿ ಕೆ.ಎಂ.ಎಫ್ ನವರಿಂದ ಹಾಲಿನ ಪುಡಿ ಜುಲೈ ವರೆಗೆ ಪೂರೈಕೆಯಾಗಿರುವುದಿಲ್ಲ ಆಗಸ್ಟ್ ನಲ್ಲಿ ಈ ಸಮಸ್ಯೆ ಬಗೆಹರಿಯಲಾಗಿದೆ ಎಂಬ ಮಾಹಿತಿಯನ್ನು ಸಭೆಗೆ ನೀಡಿದರು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ , ವಿಜಯನಗರ)**

**14) ಪಶುಸಂಗೋಪನೆ ಇಲಾಖೆ:**

ಮಾನ್ಯ ಅಧ್ಯಕ್ಷರು ಮಾತನಾಡಿ ಇಲಾಖೆಯು ಎಮ್ಮೆ ಮತ್ತು ಎತ್ತು ಜಾನುವಾರುಗಳ ಹಾಗೂ ಕುರಿ ಜಾನುವಾರು ಸಂಖ್ಯೆಯಲ್ಲಿ ರಾಜ್ಯಕ್ಕೆ ಹೋಲಿಸಿದಾಗ ಎಷ್ಟನೇ ಸ್ಥಾನದಲ್ಲಿದೆ ಎಂಬ ಮಾಹಿತಿಯನ್ನು ಕೇಳಿದಾಗ, ಇಲಾಖಾಧಿಕಾರಿಗಳು ಮಾತನಾಡಿ ದನ/ಎಮ್ಮೆ ಜಾನುವಾರು ಸಂಖ್ಯೆಯಲ್ಲಿ 16ನೇ ಸ್ಥಾನದಲ್ಲಿದೆ ಮತ್ತು ಕುರಿ/ಮೇಕೆ ಜಾನುವಾರು ಸಂಖ್ಯೆಯಲ್ಲಿ ಜಿಲ್ಲೆಯು 5ನೇ ಸ್ಥಾನದಲ್ಲಿದೆ ಹಾಗೂ ಜಿಲ್ಲೆಯಲ್ಲಿ ಯಾವುದೇ ಜಾನುವಾರು ಸಂವರ್ಧನ ಕ್ಷೇತ್ರ ಇರುವುದಿಲ್ಲ ಹಾಗೂ ಸರ್ಕಾರಿ ಗೋಶಾಲೆಯು ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ವರಲಹಳ್ಳಿ ಗ್ರಾಮದಲ್ಲಿ ಇದೆ ಎಂದು ಸಭೆಗೆ ಮಾಹಿತಿ ನೀಡಿದರು.

**15) ಮೀನುಗಾರಿಕೆ ಇಲಾಖೆ:**

ಇಲಾಖಾಧಿಕಾರಿಗಳು ಮಾತನಾಡಿ ಇಲಾಖೆಯ ಕಾರ್ಯಕ್ರಮಗಳ ಪ್ರಗತಿಗೆ ಸಂಬಂಧಿಸಿದಂತೆ ಜಿಲ್ಲಾ ವಲಯ ಕಾರ್ಯಕ್ರಮದಡಿ ಒಟ್ಟಾರೆಯಾಗಿ ರೂ.41.29 ಲಕ್ಷಗಳಿಗೆ 10.47 ಲಕ್ಷ ವೆಚ್ಚ ಭರಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

**(ಕ್ರಮ:ಉಪನಿರ್ದೇಶಕರು, ಮೀನುಗಾರಿಕೆ ಇಲಾಖೆ , ವಿಜಯನಗರ)**

**16) ಸಾಮಾಜಿಕ ಅರಣ್ಯ ಇಲಾಖೆ:**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಗಿ, ಆರ್ಥಿಕ ಗುರಿ ರೂ.3211.82 ಲಕ್ಷಗಳಿಗೆ ರೂ.260.39 ಲಕ್ಷ ವೆಚ್ಚವಾಗಿದ್ದು, ಶೇ.8 ರಷ್ಟು ಆರ್ಥಿಕ ಸಾಧನೆಯಾಗಿರುತ್ತದೆ ಮುಂದಿನ ದಿನಗಳಲ್ಲಿ ಆರ್ಥಿಕ ಗುರಿ ಸಾಧಿಸಲು ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ:ಉಪಅರಣ್ಯಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಇಲಾಖೆ, ವಿಜಯನಗರ/ಬಳ್ಳಾರಿ)**

**17) ಸಹಕಾರ ಇಲಾಖೆ:**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಗಿ, ಆರ್ಥಿಕ ಗುರಿ ರೂ.4.00 ಲಕ್ಷಗಳಿಗೆ ಶೂನ್ಯ ಸಾಧನೆಯಾಗಿರುತ್ತದೆ ಮುಂದಿನ ದಿನಗಳಲ್ಲಿ ಆರ್ಥಿಕ ಗುರಿ ಸಾಧಿಸಲು ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ: ಉಪನಿಬಂಧಕರು, ಸಹಕಾರ ಇಲಾಖೆ , ವಿಜಯನಗರ/ಬಳ್ಳಾರಿ)**

**18) ರೇಷ್ಮೆ ಇಲಾಖೆ:**

ಇಲಾಖಾಧಿಕಾರಿಗಳು ಮಾತನಾಡಿ ರೇಷ್ಮೆ ಇಲಾಖೆ ವತಿಯಿಂದ ಜಿ.ಪಂ. ಯೋಜನೆಯಡಿಯಲ್ಲಿ ಹಿಪ್ಪುನೇರಳೆ ಹೊಸ ನಾಟಿ ಮಾಡಿದ ಸಾಮಾನ್ಯ ವರ್ಗದ ಫಲಾನುಭವಿಗಳಿಗೆ ರೂ.37,500/- ಮತ್ತು ಪ.ಜಾ /ಪ.ಪಂ. ಫಲಾನುಭವಿಗಳಿಗೆ ರೂ.45,000 ಪ್ರತಿ ಎಕರೆಗೆ ಸಹಾಯ ಧನ ನೀಡುವ ಕಾರ್ಯಕ್ರಮದಂತೆ ಕ್ರಮವಹಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ 3,300 ಬೆಳೆಗಾರರು 2882 ಹೇಕ್ಟರ್ ಪ್ರದೇಶದಲ್ಲಿ ರೇಷ್ಮೆ ಕೃಷಿ ಕೈಗೊಂಡಿದ್ದು, ಜಿಲ್ಲೆಯಲ್ಲಿ ಪೂರ್ಣವಾಗಿ ಬೈ ವೋಲ್ಟೈನ್ ಗೂಡು ಉತ್ಪಾದಿಸಲಾಗುತ್ತಿರುವುದೆಂದು ತಿಳಿಸಿದರು. ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ರೇಷ್ಮೆ ಮಾರುಕಟ್ಟೆ ಬಗ್ಗೆ ಕೇಳಲಾಗಿ, ಸ್ಪರ್ಧಾತ್ಮಕ ಬೆಲೆ ಸಿಗುತ್ತಿರುವುದರಿಂದ ಎಲ್ಲಾ ರೈತರು ರಾಮನಗರ ಮಾರುಕಟ್ಟೆಗೆ ತೆರಳುತ್ತಿರುವುದಾಗಿ ಸಭೆಗೆ ಮಾಹಿತಿ ನೀಡಿದರು. ನಂತರ ಮಾನ್ಯ ಅಧ್ಯಕ್ಷರು ಮಾತನಾಡಿ ಹಿಪ್ಪುನೇರಳೆ ವಿಸ್ತೀರ್ಣ ಹೆಚ್ಚಿಸಲು ಕ್ರಮವಹಿಸಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ರೇಷ್ಮೆ ಇಲಾಖೆ , ವಿಜಯನಗರ/ಬಳ್ಳಾರಿ)**

**19) ಕೈಮಗ್ಗ ಮತ್ತು ಜವಳಿ ಇಲಾಖೆ:**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಗಿ, ಆರ್ಥಿಕ ಗುರಿ ರೂ.4.50 ಲಕ್ಷಗಳಿಗೆ ಶೂನ್ಯ ಸಾಧನೆಯಾಗಿರುತ್ತದೆ ಮುಂದಿನ ದಿನಗಳಲ್ಲಿ ಆರ್ಥಿಕ ಗುರಿ ಸಾಧಿಸಲು ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ , ವಿಜಯನಗರ/ಬಳ್ಳಾರಿ)**

**20) ಗ್ರಾಮೀಣ ಕೈಗಾರಿಕೆ ಇಲಾಖೆ:**

ಇಲಾಖೆಯ ಪ್ರಗತಿಯನ್ನು ಪರಿಶೀಲಿಸಲಾಗಿ, ಆರ್ಥಿಕ ಗುರಿ ರೂ.24.00 ಲಕ್ಷಗಳಿಗೆ ಶೂನ್ಯ ಸಾಧನೆಯಾಗಿರುತ್ತದೆ ಮುಂದಿನ ದಿನಗಳಲ್ಲಿ ಆರ್ಥಿಕ ಗುರಿ ಸಾಧಿಸಲು ಕ್ರಮವಹಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಗ್ರಾಮೀಣ ಕೈಗಾರಿಕೆ ಇಲಾಖೆ, ವಿಜಯನಗರ/ಬಳ್ಳಾರಿ)**

**21) ಸ್ವಚ್ಛ ಭಾರತ್ ಮಿಷನ್:**

ಉಪಕಾರ್ಯದರ್ಶಿಗಳು, ಜಿ.ಪಂ. ವಿಜಯನಗರ ಮಾತನಾಡಿ ವೈಯಕ್ತಿಕ ಶೌಚಾಲಯ ಕಾರ್ಯಕ್ರಮದಡಿ ತಾಂತ್ರಿಕ ಸಮಸ್ಯೆಯಿಂದಾಗಿ ಶೇ.19% ಸಾಧನೆಯಾಗಿರುತ್ತದೆ. ಮುಂದಿನ ದಿನಗಳಲ್ಲಿ ಪ್ರಗತಿಯನ್ನು ಸಾಧಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು ಹಾಗೂ ವಿಜಯನಗರ ಜಿಲ್ಲೆಯಲ್ಲಿ ಮಲ ತ್ಯಾಜ್ಯ ನಿರ್ವಹಣೆ ( FSTP) ಹೊಸಪೇಟೆ ತಾಲ್ಲೂಕಿನ ಮಲಪನಗುಡಿ ಹಾಗೂ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಹನಸಿ ಕಾರ್ಯನಿರ್ವಹಿಸುತ್ತಿವೆ ಎಂದು ಸಭೆಗೆ ಮಾಹಿತಿ ನೀಡಿದರು.

**(ಕ್ರಮ: ಯೋಜನಾ ನಿರ್ದೇಶಕರು, ಜಿ.ಪಂ., ವಿಜಯನಗರ)**

**22) ಜಲ ಜೀವನ್ ಮಿಷನ್:**

ಇಲಾಖಾಧಿಕಾರಿಗಳು ಮಾತನಾಡಿ, ಹಗರಿಬೊಮ್ಮನಹಳ್ಳಿ ತಾಲ್ಲೂಕಿನಲ್ಲಿ 3 ಬಹುಗ್ರಾಮ ಕುಡಿಯುವ ನೀರಿನ ಯೋಜನೆಯಿಂದ (ಎಂ.ವಿ.ಎಸ್.) ಜೆ.ಜೆ.ಎಂ. ಕಾಮಗಾರಿ ಮುಖಾಂತರ ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗುತ್ತಿದೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಪಾವಗಡ ಯೋಜನೆಯಿಂದ 217 ಗ್ರಾಮಗಳಿಗೆ ಕುಡಿಯುವ ನೀರಿನ ಸೌಲಭ್ಯ ಒದಗಿಸುವ ಯೋಜನೆಯು ಮುಕ್ತಾಯ ಹಂತದಲ್ಲಿರುತ್ತದೆ. ಸದರಿ ಯೋಜನೆಯಿಂದ ಜೆ.ಜೆ. ಎಂ. ಕಾಮಗಾರಿಗಳಿಂದ ಕೂಡ್ಲಿಗಿ ತಾಲ್ಲೂಕಿನ ಒಟ್ಟಾರೆ ಗ್ರಾಮಗಳಿಗೆ ನೀರನ್ನು ಒದಗಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

**(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ & ನೈ ಇಲಾಖೆ, ವಿಜಯನಗರ)**

ಕೊನೆಯದಾಗಿ ವಂದನಾರ್ಪಣೆ ಸಲ್ಲಿಸುವುದರ ಮೂಲಕ ಸಭೆಯನ್ನು ಮುಕ್ತಾಯಗೊಳಿಸಲಾಯಿತು

KPM 23/8/23

(ಶ್ರೀ ಕೆ.ಪಿ. ಮೋಹನ್ ರಾಜ್ ಭಾ.ಆ.ಸೇ.,)
ಸರ್ಕಾರದ ಕಾರ್ಯದರ್ಶಿಗಳು,
ತೋಟಗಾರಿಕೆ ಹಾಗೂ ರೇಷ್ಮೆ ಇಲಾಖೆ,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು
ಮತ್ತು ಆಡಳಿತಾಧಿಕಾರಿಗಳು, ಜಿ.ಪಂ., ವಿಜಯನಗರ